ಶ್ರೀ ಆರ್. ಎಲ್. ಜಾಲಪ್ಪ.—ಅವರು ಕೇಳಲಿಲ್ಲ. ಕೇಳಿದ್ದರೆ ಕೊಡುತ್ತಿದ್ದೆವು. ಅದು ನಮ್ಮ ಕರ್ತವ್ಯ. ಪ್ರೊಟೆಕ್ಷನ್ ಕೊಡಿ ಎಂದು ಅವರು ಕೇಳಲಿಲ್ಲ. We did not know as to when he was going and where he was going. If he asks us it is our duty to provide him security.

ಶ್ರೀ ಟಿ ಎಸ್. ಮಣಿ.—ಅಲ್ಲಿ ಬಂದು tension ಇರುವ ಸಮಯದಲ್ಲಿ ಎಂ.ಎಲ್.ಎ. ಅವರು ಅಲ್ಲಿಗೆ ಹೋದರೆ ಅವರಿಗೆ ಪ್ರಾಪರ್ ಪ್ರೊಟೆಕ್ಷನ್ ಕೊಡಬೇಕಾಗಿತ್ತಲ್ಲ.

ಶ್ರೀ ಆರ್. ಎಲ್ ಜಾಲಪ್ಪ.—ಸ್ವಾಮಿ, ಎಂ.ಎಲ್.ಎ. ಅವರು ನಮಗೆ ತಿಳಿಸದಿದ್ದರೆ ಹೇಗೆ ನಮಗೆ ಗೊತ್ತಾಗಬೇಕು ? ನಾವು ಬೇಕಾದಷ್ಟು ಕಡೆ ರಕ್ಷಣೆ ಕೊಟ್ಟಿದ್ದೇವೆ. ಎಷ್ಟೋ ಜನ ನಾಗರೀಕರಿಗೆ ರಕ್ಷಣೆ ಕೊಟ್ಟಿದ್ದೇವೆ, ಇನ್ನು ಎಂ.ಎಲ್.ಎ ಗಳಿಗೆ ಕೊಡುವುದಿಲ್ಲವೇ ? ಒಂದು ವೇಳೆ ಕೊಡದಿದ್ದರೆ ನಮ್ಮ ಕರ್ತವ್ಯ ಪಾಲನೆ ಮಾಡಿದಂತೆ ಆಗುವುದಿಲ್ಲ. We do not deserve to be a government then. ಈ ಘಟನೆ ಗೊತ್ತಾದ ತಕ್ಷಣ ನಾನು ಪೋಲೀಸಿನವರನ್ನು ಕರೆಸಿ ವಿಚಾರಿಸಿದೆ, ಅವರು ಹೇಳಿದರು. ಸ್ವಾಮಿ ಅವರು ಹೋಗುವುದು ನಮಗೂ ಗೊತ್ತಿಲ್ಲ, ಗೊತ್ತಿದ್ದರೆ ನಾವು ರಕ್ಷಣೆ ಕೊಡುತ್ತಿದ್ದೇವೆಂದು. ಇದು ಗೊತ್ತಾದ ತಕ್ಷಣ ನಾವು ಸ್ಪಾಟ್‌ಗೆ ಹೋದೆವು ಎಂದು ಅವರು ಹೇಳಿದರು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇನ್ನೊಂದು ಗಮನ ಸೆಳೆಯುವ ಸೂಚನೆಯ ಬಗ್ಗೆ ಉತ್ತರ ರೆಡಿಯಾಗಿದೆ ಆದರೆ ಕಾಪಿಗಳು ಇಲ್ಲ. ಆದ್ದರಿಂದ ದಯವಿಟ್ಟು ಸೋಮವಾರ ತೆಗೆದು ಕೊಳ್ಳಿ.

ಶ್ರೀ ವೇದಾಂತ ಹೆಮ್ಮಿಗೆ.—ಸ್ವಾಮಿ ನಾನು ಕಳುಹಿಸಿಕೊಟ್ಟಿದ್ದಂತಹ ಸೂಚನೆಯಲ್ಲಿ ಬಹಳ ಪ್ರಮುಖವಾದಂತಹ ವಿಷಯವನ್ನೇ ಬಿಟ್ಟಿದ್ದಾರೆ. ನಾನು ಕಳುಹಿಸಿಕೊಟ್ಟಿದ್ದ ವಿಷಯವೇನೆಂದರೆ ಮೈಸೂರು ರಾಜವಂಶಕ್ಕೆ ಸೇರಿದ ಪ್ರಾಚ್ಯವಸ್ತುಗಳ ವಸ್ತು ಪ್ರದರ್ಶನದ ಬಗ್ಗೆ ಆ ವಿಷಯವಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ತಪ್ಪಾಗಿದ್ದರೆ ಈಗ ಸರಿ ಮಾಡಿಕೊಳ್ಳಬೇಕೆಂದು ನನ್ನ ವಿನಂತಿ.

ಅಧ್ಯಕ್ಷರು.—ಆಯಿತು, ಸೋಮವಾರ ತೆಗೆದುಕೊಳ್ಳೋಣ.

ನಿಯಮ ೩೩೪ರ ಮೇರೆಗೆ

೧ ಜಮಖಂಡಿ ತಾಲ್ಲೂಕು ಜಂಬಗಿಯ ಶ್ರೀಮತಿ ಮಹಾದೇವಿ ಎನ್ನುವ ಯುವತಿಯ ಮರಣದ ಬಗ್ಗೆ.

ಶ್ರೀ ಬಾಬುರೆಡ್ಡಿ ವಿ. ತಂಗಳ್.—ಮಾನ್ಯ ಅಧ್ಯಕ್ಷರೇ, ಜಮಖಂಡಿ ತಾಲ್ಲೂಕಿನ ಸಾವಳಗಿ ಪೋಲೀಸ್ ಠಾಣೆಯ ಚಿಕ್ಕಜಂಬಗಿ ಗ್ರಾಮದಲ್ಲಿ ಶ್ರೀಮತಿ ಮಹಾದೇವಿ ಮಲಕಣ್ಣವರ ಎಂಬ ೧೯ ವರ್ಷದ ಯುವತಿಯ ಕೊಲೆ ನಡೆದಿದೆ. ಶಿವಪ್ಪ ಮಲಕಣ್ಣವರ ಎಂಬುವನನ್ನು ಮದುವೆಯಾಗಿದ್ದ. ಈಕೆ ಅಥಣಿ ತಾಲ್ಲೂಕಿನ ಅವರಗೋಡ ಗ್ರಾಮದ ಶ್ರೀ ಗೌಡಪ್ಪ ಪಾಟೀಲ ಎಂಬುವರ ಮಗಳು. ಈಕೆ ಗಂಡನ ಮನೆಗೆ ಹೋದ ಕೂಡಲೇ ತವರು ಮನೆಯಿಂದ ಹಣ ಮತ್ತು ಬಂಗಾರ ತರಬೇಕೆಂದು ಆಕೆಯನ್ನು ಹಿಂಸೆಗೊಳಪಡಿಸಲಾಯಿತು. ಲಗ್ನವಾದ ಮೇಲೆ ಆಕೆ ಗಂಡನ ಮನೆಯಲ್ಲಿಯೇ ಕೇವಲ ಒಂದು ತಿಂಗಳು ಇದ್ದು ಈ ಅವಧಿಯಲ್ಲಿ ಅಪಾರ ಕಿರುಕುಳ ಅನುಭವಿಸಿದಳು. ೧೯೮೭ರ ಅಕ್ಟೋಬರ್ ೮ರಂದು ಆಕೆ ಕೊಲೆಯಾದ ಸುದ್ದಿ ತಂದೆತಾಯಿಗಳಿಗೆ ತಲುಪಿತು. ತಂದೆತಾಯಿಗಳು ಧಾವಿಸಿ ಬಂದು ಆಕೆಯ ಪತಿ ಮತ್ತು ಭಾವ ಸೇರಿಕೊಂಡು ಆಕೆಯು ಕೊಲೆ ಮಾಡಿದ್ದಾರೆಂದು ದೂರು ಕೊಟ್ಟರೂ ಸಾವಳಗಿಯ ಪಿ ಎಸ್.ಐ. ಆ ದೂರನ್ನು ಸ್ವೀಕರಿಸದೆ ಮಹಾದೇವಿಯ ತಂದೆಯ ಕಡೆಯಿಂದ ಕೆಲವು ಬಿಳಿ ಹಾಳೆಗಳ ಮೇಲೆ ಒತ್ತಾಯದಿಂದ ಹೆಬ್ಬೆರಳು ಊರಿಸಿಕೊಂಡು ಶವ ಪರೀಕ್ಷೆಯ ನಂತರ ಮಹಾದೇವಿಯ ತಂದೆತಾಯಿಗಳ ವಶಕ್ಕೆ ಶವವನ್ನು ಕೊಡದೆ ತರಾತುರಿಯಿಂದ ಆಕೆಯ ಅಂತ್ಯಕ್ರಿಯೆ ನಡಿಸಲಾಯಿತು ಅಲ್ಲದೆ ನ್ಯಾಯ ಕೇಳಿದ ಮಹಾದೇವಿಯ ತಂದೆತಾಯಿಗಳನ್ನು ಬೆದರಿಸಲಾಯಿತು. ಗೌಡಪ್ಪ ಪಾಟೀಲರ ಮಗಳ ಕೊಲೆಯ ಸಮಾಚಾರ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ೧೯ ವರ್ಷದ ಹದಿಹರೆಯದ ಮುಗ್ಧ

ದೇವಿಯು ಕೊಲೆಗೆ ಕಾರಣರಾದವರನ್ನು ಬಯಲಿಗೆಳೆಯಬೇಕು. ಇದು ವರದಕ್ಷಿಣೆ ಪ್ರಕರಣದಿಂದ ಆದ ಸಾವು. ಪೋಲೀಸ್ ಅಧಿಕಾರಿಗಳಿಂದ ಯಾವುದೇ ವಿಚಾರಣೆ ನಡೆದದ್ದು ಈವರೆಗೆ ಕಂಡು ಬಂದಿಲ್ಲ. ಕಾರಣ ತಡವಾದರೂ ಚಿಂತೆಯಿಲ್ಲ ಈಗಲಾದರೂ ಮಹಾದೇವಿಯ ಸಂದೇಹಾಸ್ಪದ ಸಾವಿನ ಕುರಿತು ಸಿ.ಬಿ.ಐ. ತನಿಖೆ ನಡೆಸಿ ತಪ್ಪಿತಸ್ಥರನ್ನು ಬಂಧಿಸಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೇ, ಜಮಖಂಡಿ ತಾಲ್ಲೂಕು ಚಿಕ್ಕ ಜಂಬಗಿಯ ಶ್ರೀಮತಿ ಮಹಾದೇವಿ ೧೯ ವರ್ಷದ ಯುವತಿಯ ಮರಣದ ಬಗ್ಗೆ ಸ್ಥಳೀಯ ಸಾವಲಗಿ ಪೋಲೀಸರು ''ವರದಕ್ಷಿಣೆ ಸಾವಿನ'' ಪ್ರಕರಣವನ್ನು ದಾಖಲು ಮಾಡಿಕೊಂಡು ತಪಾಸಣೆ ನಡೆಸಿ ಆರೋಪಿಗಳ ಮೇಲೆ ದೋಷಾರೋಪಣೆಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಸದಸ್ಯರು ಸೂಚಿಸಿರುವಂತೆ ಈ ಪ್ರಕರಣದಲ್ಲಿ ಯಾವ ಮೊಕದ್ದಮೆಯನ್ನು ದಾಖಲು ಮಾಡಿಕೊಂಡಿಲ್ಲ. ಯಾವ ತನಿಖೆಯು ನಡೆದಿಲ್ಲವೆಂದು ಹೇಳಿರುವ ಮಾತಿನಲ್ಲಿ ಯಾವ ಸತ್ಯಾಂಶವೂ ಇಲ್ಲ.

ಪ್ರಕರಣದ ವಿವರಗಳು ಕೆಳಕಂಡಂತಿವೆ.

೯-೧೦-೧೯೮೭ ರಂದು ಶಿವಪ್ಪ ಪಂಡಿತ್ ಮಲಕಣ್ಣವರ್ ಎಂಬುವವರು ಸಾವಳಗಿ ಪೋಲೀಸ್ ಠಾಣೆಯಲ್ಲಿ ಹಾಜರಾಗಿ ತಮ್ಮ ಪತ್ನಿ ಶ್ರೀಮತಿ ಮಹಾದೇವಿಯು ೮-೧೦-೧೯೮೭ ರಂದು ಜಲಬಾದೆಗೆಂದು ಮನೆಯಿಂದ ಹೊರಗೆ ಹೋದವರು ಮನೆಗೆ ಬಾರದೆ ಕಾಣೆಯಾಗಿದ್ದಾಳೆಂದು ಅರ್ಜಿಯನ್ನು ಕೊಟ್ಟರು. ಈ ಅರ್ಜಿಯ ಮೇಲೆ ಸಾವಳಗಿ ಪೋಲೀಸ್ ಠಾಣೆಯಲ್ಲಿ 'ಸ್ತ್ರೀ ಕಣ್ಮರೆಯಾದ ಪ್ರಕರಣ' ವನ್ನು ದಾಖಲು ಮಾಡಿಕೊಂಡು ತನಿಖೆಯನ್ನು ಪ್ರಾರಂಭಿಸಲಾಯಿತು. ಅಷ್ಟರಲ್ಲೇ ಶ್ರೀಮತಿ ಮಹಾದೇವಿಯವರ ತಂದೆ ಗೌಡಪ್ಪ ಶಿವನಗೌಡ ಪಾಟೀಲ್ ರವರೂ ಸಹ ಅದೇ ಠಾಣೆಗೆ ಹೋಗಿ ತಮ್ಮ ವ ಗಳಿಗೆ ವರದಕ್ಷಿಣೆಗಾಗಿ ಅವಳ ಗಂಡ ಕಿರುಕುಳ ಕೊಡುತ್ತಿದ್ದುದರಿಂದ ಅವರ ಮಗಳು ಮಹಾದೇವಿ ಕಾಣೆಯಾಗಿದ್ದಾಳೆಂದು ದೂರನ್ನು ಕೊಟ್ಟರು. ಸದರೀ ದೂರಿನ ಮೇಲೆ ಭಾ. ದಂ. ಸಂ. ೪೯೮ ಎ ಪ್ರಕಾರ ಅಪರಾಧ ಕ್ರಮ ಸಂಖ್ಯೆ. ೭೨/೮೭ ಇದನ್ನು ದಾಖಲು ಮಾಡಿಕೊಂಡು ತಪಾಸಣೆಗೆ ತೆಗೆದುಕೊಳ್ಳಲಾಯಿತು.

ತಾರೀಖು ೧೦-೧೦-೧೯೮೭ ರಂದು ಶ್ರೀಮತಿ ಮಹಾದೇವಿಯವರ ಮೃತ ದೇಹವು ಚಿಕ್ಕ ಜಂಬಗಿಯ ಸರಹದ್ದಿನಲ್ಲಿ ಕೃಷ್ಣ ನದಿಯ ನೀರಿನಲ್ಲಿ ಕಾಣುತ್ತಿರುವುದಾಗಿ ತಿಳಿದು ಬಂದ ಮೇರೆಗೆ ಅಸ್ವಾಭಾವಿಕ ಮರಣದ ಪ್ರಕರಣವನ್ನು ದಾಖಲು ಮಾಡಿಕೊಂಡು ಶವದ ಮೇಲೆ ಮಹಜರ್ ಮತ್ತು ಇತರ ತಪಾಸಣೆಯನ್ನು ನಡೆಸಲಾಯಿತು. ಶವದ ಮಹಜರ್ ಇತ್ಯಾದಿಗಳನ್ನು ಮೃತ ಯುವತಿಯ ಪೋಷಕರ ಸಮ್ಮುಖದಲ್ಲಿ ನಡೆಸಿ ಮರಣೋತ್ತರ ವೈದ್ಯಕೀಯ ಪರೀಕ್ಷೆಯನ್ನೂ ನಡೆಸಲಾಯಿತು. ವೈದ್ಯರು ಶ್ರೀಮತಿ ಮಹಾದೇವಿಯವರ ಮರಣ ನೀರಿನಲ್ಲಿ ಮುಳಗಿ ಉಸಿರು ಕಟ್ಟಿದ್ದರಿಂದ ಆಯಿತೆಂದು ಅಭಿಪ್ರಾಯಪಟ್ಟಿದ್ದಾರೆ. ತಪಾಸಣೆಯನ್ನು ನಡೆಸಿದ ಜಮಖಂಡಿ ಡಿ ಎಸ್.ಪಿ. ರವರು ವರದಕ್ಷಿಣೆಗಾಗಿ ಕೊಟ್ಟ ಕಿರುಕುಳದ ಬಗ್ಗೆ ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸಿ ಇದೊಂದು ವರದಕ್ಷಿಣೆಯ ಪಿಡುಗಿನ ಮರಣವೆಂದು ಪರಿಗಣಿಸಿ ಶ್ರೀಮತಿ ಮಹಾದೇವಿಯರ ಗಂಡ ಶಿವಪ್ಪ ಪಂಡಿತ್ ಮಲಕಣ್ಣ ಮತ್ತು ಅವರ ಸಹೋದರನನ್ನು ದಸ್ತಗಿರಿ ಮಾಡಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಮೊಕದ್ದಮೆ ನ್ಯಾಯಾಲಯದ ವಿಚಾರಣೆಯಲ್ಲಿದೆ.

ಅಧ್ಯಕ್ಷರು.—ಶ್ರೀ ವಸಂತ ಬಂಗೇರಾ, ಆಬ್ಸೆಂಟ್.

2) ಮಂಗಳೂರಿನ ಹಳೆಯ ಬಂದರಿನ ಬಳಿ ಇರುವ ಬೆಂಗರೆ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡದಿರುವುದು

ಶ್ರೀಮತಿ ಮನೋರಮಾ ಮಧ್ವರಾಜ್.- ಮಾನ್ಯ ಅಧ್ಯಕ್ಷರೇ, ಮಂಗಳೂರಿನ ಹಳೆ ಬಂದರಿನ ಬಳಿ ಇರುವ ಬೆಂಗರೆ ಎಲ್ಲಾ ಅಭಿವೃದ್ಧಿ ಕ್ರಮಗಳಿಂದ ವಂಚಿತವಾದ ಪರ್ಯಾಯ ದ್ವೀಪ. ಅಲ್ಲಿನ ನಿವಾಸಿಗಳು ಬಹುತೇಕ ಮೀನುಗಾರರು. ತಲೆಮಾರುಗಳಿಂದ ಈ ಕಸುಬನ್ನು ಆಶ್ರಯಿಸಿದವರು ಅವರು ಕಸಬಿಗೆ ಬೇಕಾದ ಸ್ಥಳವನ್ನು ಹಳೇ ಬಂದರು ವಠಾರದಲ್ಲಿ ಪೋರ್ಟ್ ಇಲಾಖೆಯವರು